**ಓಂ ಶಾಂತಿ, ಬಾಪ್ ದಾದಾ, ಅವ್ಯಕ್ತ ಮುರಳಿ 28-09-1969.**

**(ओम शान्ति, बापदादा. अव्यक्त मुरली 28-09-1969)**

***ಪೂರ್ಣ ಕೋರ್ಸ್ ನ ಸಾರ - ಹೇಳುವುದು ಮತ್ತು ಮಾಡುವುದನ್ನು ಸಮಾನ ಮಾಡಿರಿ***

**(पूरे कोर्स का सार – कथनी-करनी एक करो)**

ಯಾವ ರೂಪದಲ್ಲಿ ಮಿಲನ ಮಾಡುತ್ತಿರುವಿರಿ? ಅವ್ಯಕ್ತರೂಪದಿಂದಲೋ, ಸ್ನೇಹರೂಪರೂಪದಿಂದಲೋ ಅಥವಾ ಶಕ್ತಿರೂಪದಿಂದಲೋ? ತಂದೆಯ ರೂಪದಿಂದ ಮಿಲನ ಮಾಡುತ್ತಲೇ ಇದ್ದೀರಿ. ವರ್ತಮಾನ ಸಮಯದಲ್ಲಿ ಯಾವ ವಿಶೇಷ ರೂಪವಿದೆ? ಇಡೀ ದಿನದಲ್ಲಿ ಈ ಮೂರೂ ರೂಪಗಳಲ್ಲಿ ಹೆಚ್ಚು ಯಾವ ರೂಪವಿರುತ್ತದೆ? ಈ ಮೂರರಲ್ಲಿ ಶ್ರೇಷ್ಠ ರೂಪ ಯಾವುದು? (ಎಲ್ಲರೂ ತಮ್ಮ-ತಮ್ಮ ವಿಚಾರವನ್ನು ತಿಳಿಸಿದರು) ಈಗ ಕೇವಲ ಪ್ರಶ್ನೆ ಕೇಳುತ್ತೇವೆ ನಂತರ ಸ್ಪಷ್ಟ ಮಾಡುತ್ತೇವೆ. ಯಾರೆಲ್ಲ ಹೆಚ್ಚಿನ ತರಬೇತಿ ಕೋರ್ಸ್ ಅನ್ನು ತೆಗೆದುಕೊಂಡಿರುವಿರೋ ಅದರಲ್ಲಿ ಮುಂದೆ ವಿಘ್ನಗಳನ್ನು ನಾಶ ಮಾಡುವಂತಹ ಎಲ್ಲಕ್ಕಿಂತ ಶಕ್ತಿಶಾಲಿ ವಿಚಾರ ಯಾವುದು? ಎಲ್ಲರೂ ಭಿನ್ನ ಭಿನ್ನ ವಿಚಾರಗಳನ್ನಂತೂ ಹೇಳಿದಿರಿ. ಈಗ ಹೇಳಿದವರು ಈ ವಿಚಾರವನ್ನು ಉಪಯೋಗಿಸಿ ಎಷ್ಟು ಸಮಯದಲ್ಲಿ ವಿಘ್ನ ದೂರವಾಯಿತೆಂದು ತಮ್ಮ ಅನುಭವ ಬರೆದು ಕಳಿಸಿ, ಯಾವುದೇ ಔಷಧವನ್ನು ಉಪಯೋಗಿಸಿದಾಗ ಅನೇಕರಿಗೆ ಅದರ ಲಾಭವನ್ನು ಪಡೆಯುವುದು ಸಹಜವಾಗುತ್ತದೆ. ಎರಡು ಮಾತುಗಳನ್ನು ನೆನಪಿಡಿ, ಅದರಲ್ಲಿ ತಮ್ಮ ಎಲ್ಲಾ ವಿಷಯಗಳು ಬಂದುಬಿಡುತ್ತವೆ ಇದೀಗ ಮಾಡಿರುವ ಕೋರ್ಸ್ ನ ಮುಖ್ಯ ಸಾರ ಎರಡು ಶಬ್ದಗಳಲ್ಲಿ ನೆನಪಿಡಬೇಕು. *"ಏನು ಹೇಳುತ್ತೀರೋ ಅದನ್ನೇ ಮಾಡುವುದು"* ಅದನ್ನು ನೆನಪಿಡಿ, ನಾವು ಬ್ರಹ್ಮಾಕುಮಾರಿ, ಬಾಪ್ ದಾದಾರವರ ಮಕ್ಕಳು ಆಜ್ಞಾಕಾರಿ, ಸಹಯೋಗಿಗಳು ಎಂದು ಹೇಳುತ್ತೀರಿ. ಯಾವ ಮಾತನ್ನು ಹೇಳುತ್ತೀರೋ ಅದನ್ನು ಪ್ರಯೋಗದಲ್ಲಿ (ನಿಜ ಜೀವನ) ತರಬೇಕು. ಹೇಳುವುದು ಎಂದರೆ ಮಾಡುವುದು, ಹೇಳುವುದರಲ್ಲಿ ಮತ್ತು ಮಾಡುವುದರಲ್ಲಿ ಅಂತರವಿರಬಾರದು. ಇದೇ ತಮ್ಮ ಕೋರ್ಸ್‌ನ ಸಾರ. ವಿಕಾರ ಒಳ್ಳೆಯದಲ್ಲವೆಂದು ಅನೇಕ ವರ್ಷಗಳಿಂದ ಹೇಳುತ್ತಿರುವಿರಿ ಬೇರೆಯವರಿಗೂ ತಿಳಿಸುತ್ತೀರಿ ಆದರೆ ತಾವು ಜೀವನದಲ್ಲಿ ನಿರ್ಲಿಪ್ತರಾಗಿರುವುದಿಲ್ಲ. ತಮ್ಮದೇ ಮಾತು ಮತ್ತು ಕರ್ಮ ಬದಲಾಗುವುದು. ಆದ್ದರಿಂದ ಏನನ್ನು ಹೇಳುತ್ತೇವೋ ಅದನ್ನು ಮಾಡುತ್ತೇವೆ ಎಂಬ ಮಾತನ್ನು ಇಂದಿನಿಂದ ನೆನಪಿಟ್ಟುಕೊಳ್ಳಿ. ಏನನ್ನು ವಿಚಾರ ಮಾಡುತ್ತೇವೆಯೋ ಅಥವಾ ಹೇಳುತ್ತೇವೆಯೋ ಅದನ್ನು ಮಾಡಿ ತೋರಿಸಬೇಕು. ಕೇವಲ ಹೇಳುವುದಲ್ಲ ಮಾಡುವುದು. ಈಗ ಉಳಿದಿರುವಂತಹ ಸೇವೆ ಕೇವಲ ಹೇಳುವುದರಿಂದಲ್ಲ ಆದರೆ ತಮ್ಮ ಕ್ರಿಯೆಯಿಂದ ಆಗುವುದು. ಹೇಳುವುದು, ಮಾಡುವುದು ಮತ್ತು ಇರುವುದು ಎಂದು ಹೇಳುತ್ತಾರಲ್ಲವೇ? ಇಡೀ ದಿನದಲ್ಲಿ ತಾವು ಕರ್ಮ ಮಾಡುತ್ತೀರಿ, ಮನೆಯಲ್ಲಿರುತ್ತೀರಿ ಅಲ್ಲಿ ಹೇಳುವುದು, ಮಾಡುವುದು ಮತ್ತು ಇರುವುದು ಈ ಮೂರೂ ಒಂದೇ ಆದಾಗ ಕರ್ಮಾತೀತ ಅವಸ್ಥೆಯನ್ನು ಬೇಗನೇ ತಲುಪುವಿರಿ. ಪ್ರತಿಕ್ಷಣ ನಾನು ಏನು ಹೇಳುತ್ತೇನೆಯೋ ಅದನ್ನು ಮಾಡುತ್ತೇನಾ ಎಂದು ಪರಿಶೀಲನೆ ಮಾಡಿಕೊಳ್ಳಿ. ಹೇಳುವುದಂತೂ ಸರ್ವಶಕ್ತಿವಂತನ ಸಂತಾನರೆಂದು ಹೇಳುತ್ತೀರಿ. ಆದರೆ ಮಾಡುವುದೇನು? ದುರ್ಬಲತೆಯ ಮಾತುಗಳನ್ನು ಆಡುತ್ತೀರಿ. ಇಂದಿನಿಂದ ಏನನ್ನು ಹೇಳುತ್ತೇನೋ ಅದನ್ನು ಮಾಡುತ್ತೇನೆಂದು ಪಕ್ಕಾ ಮಾಡಿಕೊಳ್ಳಿ. ಯಾರು ಹೀಗೆ ಆಗುತ್ತಾರೋ ಅವರನ್ನು ನೋಡಿ ಬೇರೆಯವರೂ ಹಾಗೆಯೇ ಆಗುವರು. ತಮಗೆ ಪರಿಶ್ರಮ ಪಡುವ ಆವಶ್ಯಕತೆ ಇರುವುದಿಲ್ಲ. ಇಲ್ಲಿಯವರೆಗೂ ಹೇಳುವುದೊಂದು ಮಾಡುವದು ಇನ್ನೊಂದು ಎಂಬ ದೂರುಗಳೇ ಸಿಕ್ಕಿವೆ. ದೂರುಗಳನ್ನೂ ಸಮಾಪ್ತಿ ಮಾಡಿ. ಆಗ ಏನಾಗುವಿರಿ? ಅಲ್ಲಾಹ್ (ಶ್ರೇಷ್ಠ) ಆಗುವಿರಿ. ಎಷ್ಟು ಶ್ರೇಷ್ಠರಾಗುವಿರೋ ಅಷ್ಟು ಇಚ್ಛೆಯಿಲ್ಲದಿದ್ದರೂ ಹೆಸರುವಾಸಿಯಾಗುವಿರಿ. ಆದ್ದರಿಂದ ಮಾಡಿದಂತಹ ಕೋರ್ಸ್ ನ ಮುಖ್ಯ ಸಾರ ಈ ಶಿಕ್ಷಣವಾಗಿದೆ. ಎಲ್ಲರೂ ಭಯಪಡುವಂತಹ

ಭಯಾನಕ ಮನುಷ್ಯನಾರು? ಜಗತ್ತಿನ ಮಾತು ಜಗತ್ತಿಗಿರಲಿ, ಆದರೆ ಈ ದೈವೀ ಪರಿವಾರದಲ್ಲಿ ಅಂತರ್ಯದಲ್ಲಿ ಒಂದು ರೀತಿಯಿದ್ದು ಹೊರಗಿನ ರೂಪ ಇನ್ನೊಂದು ಇರುವವನು ಅತೀ ಹೆಚ್ಚು ಭಯಾನಕ, ಹಾನಿಕಾರಕ ವ್ಯಕ್ತಿ ಅವನು ಪರನಿಂದಕರಿಗಿಂತ ಹೆಚ್ಚು ಭಯಾನಕ ಏಕೆಂದರೆ ಅವನು ಯಾರ ಸಮೀಪಕ್ಕೂ ಬರಲಾರ, ಸ್ನೇಹಿ ಆಗಲಾರ, ಅವನಿಂದ ಎಲ್ಲರೂ ದೂರವಿರಲು ಬಯಸುತ್ತಾರೆ. ಆದ್ದರಿಂದ ಈ ಭಟ್ಟಿಯಲ್ಲಿ ತಮ್ಮೆಲ್ಲರಿಗೂ ಈ ಶಿಕ್ಷಣ ಸಿಕ್ಕಿದೆ. ಇದನ್ನೇ ಸತ್ಯತೆ ಮತ್ತು ಸ್ವಚ್ಛತೆ ಎಂದು ಕರೆಯುತ್ತಾರೆ. ಯಾವ ಮಾತಿನಲ್ಲಿ ಸ್ವಚ್ಛತೆ? ಯಾವ ಮಾತಿನಲ್ಲಿ ಸತ್ಯತೆ? ಇವುಗಳ ರಹಸ್ಯವೂ ಬಹಳ ಗೂಢವಾಗಿದೆ. **ಸತ್ಯತೆಯಾಗಿದೆ ಏನನ್ನು ಮಾಡುತ್ತಿರೋ, ಏನನ್ನು ಯೋಚಿಸುತ್ತೀರೋ ಅದನ್ನೇ ವರ್ಣನೆ ಮಾಡುವುದು, ನಕಲಿ ರೂಪವಲ್ಲ. ಮನ-ವಚನ-ಕರ್ಮ ಈ ಮೂರೂ ಒಂದೇ ರೂಪದಲ್ಲಿರಬೇಕು. ಒಂದು ವೇಳೆ ಮನದಲ್ಲಿ ಏನೇ ಸಂಕಲ್ಪ ಉತ್ಪನ್ನವಾದರೂ ಅದರಲ್ಲಿ ಸತ್ಯತೆ ಇರಬೇಕು. ಸ್ವಚ್ಛತೆ - ಅಂತರ್ಯದಲ್ಲಿ ಯಾವುದೇ ವಿಕರ್ಮದ ಕೊಳಚೆಯಿರಬಾರದು. ಯಾವುದೇ ಭಾವ-ಸ್ವಭಾವದ ಹಳೆಯ ಸಂಸ್ಕಾರಗಳ ಕಸವಿರಬಾರದು. ಯಾರು ಈ ರೀತಿ ಸ್ವಚ್ಛವಾಗಿರುವರೋ ಅವರೇ ಸತ್ಯವಂತರಾಗಿರುವರು.** ಅವರ ಲಕ್ಷಣಗಳೇನು? ಯಾರು ಸತ್ಯವಂತರೋ ಅವರು ಸರ್ವರಿಗೂ ಪ್ರಿಯರು. ಅದರಲ್ಲಿಯೂ ಅವರು ಮೊದಲು ಪ್ರಭುಪ್ರಿಯರು, ಸತ್ಯವಂತರ ಮೇಲೆ ಸಾಹೇಬ ರಾಜಿ ಆಗಿರುತ್ತಾರೆ. ಆದ್ದರಿಂದ ಅವರು ಮೊದಲು ಪ್ರಭುಪ್ರಿಯರು ನಂತರ ದೈವೀ ಪರಿವಾರದ ಪ್ರಿಯರು. ಅವರನ್ನು ಯಾರೂ ಹೀನ ದೃಷ್ಟಿಯಿಂದ ನೋಡುವುದಿಲ್ಲ. ಅವರ ದೃಷ್ಟಿ, ವಾಣಿ ಮತ್ತು ಕರ್ಮದಲ್ಲಿ ಪರಿಪಕ್ವತೆಯಿರುವುದರಿಂದ ತಾನೂ ತಳಮಳಗೊಳ್ಳುವುದಿಲ್ಲ ಮತ್ತು ಬೇರೆಯವರನ್ನೂ ತಳಮಳಗೊಳಿಸುವುದಿಲ್ಲ. ಸತ್ಯವಂತ ಎಲ್ಲರಿಗೂ ಪ್ರಿಯ. ಇನ್ನು ಕೆಲವರು ನಾವು ಸತ್ಯವಂತರಾಗಿದ್ದೇವೆ ಆದರೆ ನಮ್ಮನ್ನು ಜನ ತಿಳಿದುಕೊಳ್ಳುತ್ತಿಲ್ಲ ಎಂದು ಅಂದುಕೊಳ್ಳುವರು. ಅಸಲಿ ವಜ್ರ ಎಂದೂ ಬಚ್ಚಿಡಲಾಗದು. ಆದ್ದರಿಂದ ನಾನು ಹೀಗಿದ್ದೇನೆ. ಆದರೆ ನನ್ನನ್ನು ಅರ್ಥಮಾಡಿಕೊಳ್ಳುತ್ತಿಲ್ಲ ಎಂದು ತಿಳಿಯುವುದೂ ಸತ್ಯತೆಯಲ್ಲ. ಸತ್ಯತೆ ಎಂದೂ ಬಚ್ಚಿಡಲಾಗದು ಮತ್ತು ಸತ್ಯವಂತರು ಎಲ್ಲರಿಗೆ ಪ್ರಿಯರಾಗುತ್ತಾರೆ. ನಾವು ಸಮೀಪವಿಲ್ಲ ಆದ್ದರಿಂದ ಪ್ರಖ್ಯಾತರಾಗಿಲ್ಲವೆಂದು ಇನ್ನೂ ಕೆಲವರು ತಿಳಿಯುತ್ತಾರೆ. ಆದರೆ ಯಾರು ಸತ್ಯವಂತರು ಮತ್ತು ಪಕ್ಕಾ ಆಗಿರುವರೋ ಅವರು ದೂರವಿದ್ದರೂ ತಮ್ಮ ಪರಿಚಯವನ್ನು ಬಚ್ಚಿಟ್ಟುಕೊಳ್ಳಲಾರರು. ಯಾರು ಎಷ್ಟೇ ದೂರವಿರಲಿ ಆದರೆ ಬಾಪ್ ದಾದಾ ಅವರ ಸಮೀಪದಲ್ಲಿದ್ದಾರೆ. ಯಾರು ತಂದೆಯ ಸಮೀಪದಲ್ಲಿದ್ದಾರೋ ಅವರು ಎಲ್ಲರ ಸಮೀಪದಲ್ಲಿದ್ದಾರೆ. ಆದ್ದರಿಂದ ಸತ್ಯವಂತರಾಗಿ. ಸ್ವಚ್ಛತೆಯ ಪ್ರಮಾಣ ನಡವಳಿಕೆಯಲ್ಲಿ ಕಂಡು ಬರುತ್ತದೆ. ಕೇವಲ ತಿಳಿದುಕೊಳ್ಳುವುದಷ್ಟೇ ಅಲ್ಲ, ಆದರೆ ಕರ್ಮದಲ್ಲಿ ಮಾಡಿ ತೋರಿಸಬೇಕಾಗಿದೆ. ಆ ಕರ್ಮ ಕೂಡ ಬೇರೆಯವರ ಸೇವೆಗೆ ನಿಮಿತ್ತವಾಗಿರಬೇಕು. ತಮ್ಮ ಮನ, ವಚನ ಮತ್ತು ಕರ್ಮಗಳನ್ನು ಪರಿಶೀಲನೆ ಮಾಡಿಕೊಳ್ಳಿ.

ತಮ್ಮನ್ನು ತಾವು ಏನೆಂದು ಕರೆದುಕೊಳ್ಳುತ್ತೀರಿ ಮತ್ತು ಬಾಪ್ ದಾದಾ ಅವರು ತಮ್ಮೆಲ್ಲರಿಗೂ ಯಾವ ಬಿರುದನ್ನು ಕೊಡುತ್ತಾರೆ ಎಂಬುದು ನೆನಪಿದೆಯೇ? ಯಾರು ಸೇವಾಧಾರಿಗಳೋ ಅವರ ಪ್ರತಿ ಸಂಕಲ್ಪ, ಮಾತು ಮತ್ತು ಕರ್ಮ ಸೇವೆಯನ್ನೇ ಮಾಡುವುದು. ಭಾಷಣ ಮಾಡುವುದು, ಯಾರಿಗಾದರೂ ತಿಳಿಸಿಕೊಡುವುದು ಕೇವಲ ಇದೇ ಸೇವೆಯಲ್ಲ ಆದರೆ ಯಾರು ಸೇವಾಧಾರಿಗಳೊ ಅವರು ಪ್ರತಿಕ್ಷಣ ಸೇವೆಯನ್ನೇ ಮಾಡುತ್ತಿರುತ್ತಾರೆ. ನಮ್ಮದು ಪ್ರತಿಕ್ಷಣ ಸೇವಾಧಾರಿಯ ನಡೆ-ನುಡಿಯಿದೆಯೋ ಅಥವಾ ಅಲ್ಲಲ್ಲಿ ಸೇವೆಗೆ ವಿರುದ್ಧವಾಗಿರುತ್ತದೆಯೇ( ಡಿಸ್ ಸರ್ವಿಸ್) ಎಂದು ನೋಡಿಕೊಳ್ಳಬೇಕು. ಸೇವಾಧಾರಿಯೆಂಬ ಹೆಸರಿರುವಾಗ ಕರ್ಮವೂ ಅದೇ ರೀತಿಯಾಗಿರಬೇಕು. ಆದ್ದರಿಂದ ಏನು ಹೇಳುತ್ತೇವೆಯೋ ಅದನ್ನು ಮಾಡಬೇಕು. ಇದನ್ನು ನೆನಪಿಟ್ಟುಕೊಂಡಾಗ ಪುರುಷಾರ್ಥದಲ್ಲಿ ಸಹಜ ಸಫಲತೆ ಬರುವುದು, ನಾವು ಇಷ್ಟು ಜಿಜ್ಞಾಸುಗಳಿಗೆ ತಿಳಿಸಿದೆವು, ಇಷ್ಟು ಭಾಷಣ ಮಾಡಿದೆವು, ಬಹಳ ಸೇವೆ ಮಾಡಿದೆವು ಎಂದು ಕೆಲವರು ಬಹಳ ಖುಷಿಪಡುತ್ತಾರೆ. ಆದರೆ ಅದಾಗಿದೆ ಹದ್ದಿನ ಸೇವೆ, ಈಗಂತೂ ಬೇಹದ್ದಿನ ಸೇವೆ ಮಾಡಬೇಕು. ಮನ, ವಚನ, ಕರ್ಮ ಮೂರೂ ರೂಪದಿಂದಲೂ ಬೇಹದ್ದಿನ ಸೇವೆ ಮಾಡಬೇಕು. ಅಂತಹವರಿಗೆ ಹೇಳಲಾಗುತ್ತದೆ ಸೇವಾಧಾರಿಗಳು. ನಾವು ಎಷ್ಟು ಸೇವಾಧಾರಿಗಳೆಂದು ಈಗ ತಮ್ಮನ್ನು ತಾವು ನೋಡಿಕೊಳ್ಳಿ. ಈ ರೀತಿಯ ಸೇವಾಧಾರಿ ಸ್ನೇಹಿಯೂ ಆಗಿರುತ್ತಾನೆ. ಈಗ

ತಾವೆಲ್ಲ ಇಂತಹ ಸಿಕ್ಕಾ (ಠಪ್ಪಾ/ಗುರುತು) ಹಾಕಿಕೊಂಡಿರುವಿರಾ? ಯಾರಾದರೂ ಸಾಹಸವನ್ನೂ ಇಟ್ಟುಕೊಳ್ಳುವಿರೋ? ಮಾಡಲೇಬೇಕು ಎಂದಾಗ ಸಿಕ್ಕಾ (ಠಪ್ಪಾ) ಬಿದ್ದಿತು ಎಂದರ್ಥ. ಪರೀಕ್ಷೆಯಲ್ಲಿ ಪಾಸಾಗುವೆವೋ ಅಥವಾ ನಾಪಾಸಾಗುವೆವೋ ಎಂದು ತಮ್ಮಲ್ಲಿ ಸಂಶಯವನ್ನೇಕೆ ಇಟ್ಟುಕೊಳ್ಳುತ್ತೀರಿ. ಬುದ್ಧಿವಂತ ವಿದ್ಯಾರ್ಥಿಗಳು ನಾವಂತೂ ನಂಬರವನ್ ಬರುತ್ತೇವೆ ಎಂದು ಸದಾ ನಿಶ್ಚಯದಿಂದ ಹೇಳುತ್ತಾರೆ. ಮೊದಲೇ ತಮ್ಮ ಮೇಲೆ ಸಂಶಯ ಬಂದರೆ ಸಂಶಯದ ಫಲಿತಾಂಶ ಏನಾಗುತ್ತದೆ? ನಂತರ ವಿಜಯಿಯಾಗುವುದಿಲ್ಲ. ನಿಶ್ಚಯವಿಲ್ಲದಿದ್ದರೆ ಸ್ವಲ್ಪ ಸಂಶಯವಿದ್ದರೂ, ವಿಜಯಿಯಾಗುವುದಿಲ್ಲ. ತಾವೆಲ್ಲರೂ ಪ್ರಾರಂಭದಿಂದಲೇ ಆಸ್ತಿಯನ್ನು ಪಡೆದೇ ಪಡೆಯುವೆವು ಎಂದು ಪಣ ತೊಟ್ಟಿದ್ದಿರೋ ಅಥವಾ ನೋಡೋಣ ಎಂದು ಅಂದುಕೊಂಡಿದ್ದಿರೋ? ಪಣ ತೊಡುವುದು ಎಂದರೆ ಆಗುವುದು.

ತಮ್ಮನ್ನು ತಾವು ನಿಶ್ಚಯ ಬುದ್ಧಿಯವರೆಂದು ಹೇಳುವಾಗ ಯಾವುದೇ ಮಾತಿನಲ್ಲಿ, ತಂದೆಯಲ್ಲಿ ಅಥವಾ ತಂದೆಯ ಜ್ಞಾನದಲ್ಲಿ, ತಂದೆಯ ಪರಿವಾರದಲ್ಲಿ ಸಂಶಯ ಅಥವಾ ವಿಕಲ್ಪ ಬರಬಾರದು. ನಾವು ಶಿವತಂದೆಯ ಮಕ್ಕಳು ಎಂದರೆ ಸರ್ವಶಕ್ತಿವಂತನ ಮಕ್ಕಳು, ನಿಶ್ಚಯಬುದ್ಧಿಯವರು ಎಂದು ಯಾರು ಹೇಳುತ್ತಾರೆ? ಸರ್ವಶಕ್ತಿವಂತನ ಮಕ್ಕಳು ಹೇಳುತ್ತಾರೆ. ನಿಶ್ಚಯವಿಟ್ಟುಕೊಂಡಾಗಲೇ ವಿಜಯವಾಗುವುದು. ನಿಶ್ಚಯವಿಲ್ಲದಿದ್ದರೆ ತಮ್ಮ ಕರ್ಮಗಳೂ ಹಾಗೆಯೇ ಆಗುವವು. ನಿಶ್ಚಯವಿಟ್ಟುಕೊಂಡರೆ ಕರ್ಮಗಳೂ ಹಾಗೆಯೇ ಆಗುವವು. ಒಂದು ವೇಳೆ ನೋಡೋಣ, ಮಾಡೋಣವೆಂದು ಯೋಚಿಸಿದರೆ ಕರ್ಮಗಳು ಸಡಿಲಗೊಳ್ಳುವವು. ಎಂದಿಗೂ ತಮ್ಮಲ್ಲಿ ದುರ್ಬಲತೆಯ, ಸಂಶಯದ ಭಾವನೆಗಳು ಬರಬಾರದು. ದುರ್ಬಲತೆಯ ಸಂಕಲ್ಪವೇ ಸಂಶಯ. ಈಗ ಎಲ್ಲಿಯವರೆಗೆ ಈ ಹಳೆಯ ಸಂಸ್ಕಾರ ಮತ್ತು ಸಂಕಲ್ಪಗಳು ಉಳಿಯುತ್ತವೆ? ಸಂಸ್ಕಾರ ದೊಡ್ಡದಾಯಿತು, ಆದರೆ ಹಳೆಯ ಸಂಕಲ್ಪವೂ ನಾಶವಾಗಬೇಕು. ಆಗ ಭಟ್ಟಿಯಿಂದ ಪಕ್ವವಾಗಿ ಹೋಗುತ್ತಿರುವಿರಿ ಎಂದು ಹೇಳುವೆವು.

ಭಟ್ಟಿಯ ಅರ್ಥವೇನು? ಭಟ್ಟಿಯಲ್ಲಿ ಎಲ್ಲವೂ ಸುಟ್ಟು ಭಸ್ಮವಾಗುತ್ತದೆ. ರೂಪವೇ ಬದಲಾಗುತ್ತದೆ. ಯಾವುದೇ ವಸ್ತುವನ್ನು ಭಟ್ಟಿಯಲ್ಲಿ ಹಾಕುವುದರಿಂದ ಅದರ ರೂಪ, ಗುಣ ಮುಂತಾದವು ಬದಲಾಗುತ್ತವೆ. ತಾವೂ ಭಟ್ಟಿ ಮಾಡಿದಾಗ ರೂಪ, ಗುಣ ಬದಲಾಗಬೇಕು. ಇಟ್ಟಿಗೆ ಪಕ್ವವಾದಾಗ ಮೊದಲು ಮಣ್ಣಾಗಿದ್ದು ಅದರ ರೂಪ, ಗುಣ ಮತ್ತು ಕರ್ತವ್ಯ ಬದಲಾಗುತ್ತದೆ. ಅದೇ ರೀತಿ ತಮ್ಮ ರೂಪ, ಗುಣ ಮತ್ತು ಕರ್ತವ್ಯ ಮೂರೂ ಬದಲಾಗಬೇಕು ಇದೇ ಭಟ್ಟಿಯ ಫಲಿತಾಂಶವಾಗಿದೆ. ಈಗ ಹೇಳಿ ಬದಲಾಗಿರುವಿರಾ ಅಥವಾ ಬದಲಾಗುತ್ತೀರಾ? ತಮ್ಮ ಉತ್ಸಾಹದ ಜೊತೆಗೆ ಬಾಪ್ ದಾದಾ ಅವರ ಸಹಯೋಗವೂ ಇದೆ. ಎಷ್ಟು ತಾವು ತಮ್ಮಲ್ಲಿ ನಿಶ್ಚಯವಿಡುವಿರೋ ಅಷ್ಟು ಬಾಪ್ ದಾದಾ ಅವರೂ ಅವಶ್ಯವಾಗಿ ಸಹಯೋಗಿಯಾಗುವರು, ಸ್ನೇಹಿಗೆ ಅವಶ್ಯವಾಗಿ ಸಹಯೋಗ ಸಿಗುತ್ತದೆ. ಯಾರಿಂದಲಾದರೂ ಸಹಯೋಗ ಬೇಕಿದ್ದರೆ ಮೊದಲು ಸ್ನೇಹಿಯಾಗಬೇಕು. ಸ್ನೇಹಿಗೆ ಸಹಯೋಗವನ್ನು ಬೇಡಬೇಕಾಗಿಲ್ಲ. ಬಾಪ್ ದಾದಾ ಅವರಿಗೆ ಸ್ನೇಹಿಯಾದರೆ, ಪರಿವಾರದ ಸ್ನೇಹಿಯಾಗುವಿರಿ. ಆಗ ಎಲ್ಲರ ಸಹಯೋಗ ಸ್ವತಃ ಸಿಗುವುದು, ನಿಶ್ಚಯಬುದ್ಧಿ ಮತ್ತು ನಷ್ಟೋಮೋಹ ಇವೇ ಎರಡು ಮುಖ್ಯವಾದ ಮಾತುಗಳು, ಈ ತಿಲಕವನ್ನು ಹಣೆಯಲ್ಲಿ ಆಗಲೇ ಇಡಲಾಗಿದೆ. ಏನು ಹೇಳುತ್ತಿರೋ ಹಾಗೆಯೇ ಮಾಡುತ್ತೇವೆ ಎಂಬ ಸ್ಲೋಗನ್ ನೆನಪಿಟ್ಟುಕೊಳ್ಳಬೇಕು ಮಾತೆಯರ ಶೃಂಗಾರವೂ ಇದೇ ಆಗಿದೆ. ಮಾತೆಯರು ಹೆಚ್ಚು ಶೃಂಗಾರ ಮಾಡಿಕೊಳ್ಳುತ್ತಾರಲ್ಲವೇ? ಹಾಗಾದರೆ ಈ ಮಾತೆಯರ ಶೃಂಗಾರ ರತ್ನಗಳಿಂದ ಮಾಡಲಾಗುತ್ತದೆ. ರತ್ನಗಳ ಶೃಂಗಾರ ಎಲ್ಲಕ್ಕಿಂತ ಹೆಚ್ಚು ಹೊಳೆಯುವಂತಹದಾಗಿದೆ. ಚಿನ್ನದಲ್ಲಿ ರತ್ನವಿದ್ದರೆ ಹೆಚ್ಚು ಹೊಳೆಯುತ್ತದೆ. ಆದ್ದರಿಂದ ಬಾಪ್ ದಾದಾರವರು ಈ ಮಾತೆಯರನ್ನು ರತ್ನಗಳಿಂದ ಶೃಂಗರಿಸಿದ್ದಾರೆ. ಏಕೆಂದರೆ ಸಂಗಮದಲ್ಲಿ ಚಿನ್ನಕ್ಕಿಂತಲೂ ಹೆಚ್ಚು ವಜ್ರವಾಗಬೇಕು. ಎಷ್ಟೆಷ್ಟು ತಮ್ಮನ್ನು ರತ್ನಗಳಿಂದ ಶೃಂಗರಿಸಿಕೊಳ್ಳುತ್ತೀರೋ ಅಷ್ಟಷ್ಟು ಇಚ್ಛೆಯಿಲ್ಲದಿದ್ದರೂ ಜಗತ್ತಿನ ದೃಷ್ಟಿ ನಿಮ್ಮ ಕಡೆಗೆ ಹೋಗುವುದು.

ನಮ್ಮ ಕಡೆಗೆ ನೋಡಿ ಎಂದು ಹೇಳುವ ಅಗತ್ಯವಿಲ್ಲ, ಈ ಜ್ಞಾನ ರತ್ನಗಳ ಶೃಂಗಾರ ದೂರದಲ್ಲಿರುವವರ ಗಮನ ಸೆಳೆಯುವುದು. ಆದ್ದರಿಂದ ಈ ರತ್ನಗಳ ಶೃಂಗಾರವನ್ನು ಸದಾಕಾಲಕ್ಕೂ ಇಟ್ಟುಕೊಳ್ಳುವ ನಿಶ್ಚಯ ಮಾಡಿ.

ಇಂದು ಅಮೃತವೇಳೆ ಸಾಕಾರ ರೂಪದಲ್ಲಿ ಜೊತೆಗಿದ್ದಂತಹ ಅನೇಕ ಮಕ್ಕಳು ವಿಶೇಷವಾಗಿ ನೆನಪಿಗೆ ಬಂದರು. ಏಕೆಂದರೆ ಇತ್ತೀಚೆಗೆ ಜೊತೆಗಿದ್ದಂತಹವರ ಪುರುಷಾರ್ಥ ಮೊದಲಿಗಿಂತಲೂ ಬಹಳ ಚೆನ್ನಾಗಿದೆ. ಆದ್ದರಿಂದ ಪುರುಷಾರ್ಥದ ಸ್ನೇಹದಲ್ಲಿ ಅವರ ನೆನಪು ಬಂತು. ವರ್ತಮಾನ ಸಮಯ ಮಧುಬನದವರಲ್ಲಿ ಪರಿವರ್ತನೆ ವಿಶೇಷವಾಗಿ ಕಂಡು ಬರುತ್ತದೆ. ಪ್ರತಿಯೊಂದು ಸ್ಥಾನದ ರತ್ನ ಪ್ರಕಾಶಿಸುತ್ತಿದೆ. ಒಂದೊಂದು ಸ್ಥಾನದ ಹೊಳೆದ ರತ್ನ ಹೋಗಿ ತನ್ನ ಸಮಾನ ಹೇಗೆ ಮಾಡುತ್ತದೆಯೆಂದು ಈಗ ನೋಡೋಣ. ಸಾಹಸವಿಲ್ಲದ ಮಾತನ್ನು ಎಂದೂ ಆಡಬೇಡಿ, ಪುರುಷಾರ್ಥಹೀನ ಮತ್ತು ಸಾಹಸಹೀನರಾಗುವ ಕಾಲ ಮುಗಿದು ಹೋಯಿತು, ಸಹಯೋಗಿಗಳಾಗಬೇಕು ಮತ್ತು ಮಾಡಿ ತೋರಿಸಬೇಕು. ಈಗ ಎಲ್ಲರ ಆಂತರ್ಯದಲ್ಲಿ ನಾವೂ ಬೇಗನೇ ಹೋಗಬೇಕು ಎಂಬುದಿದೆ. ಮೊದಲು ಮಕ್ಕಳೆಲ್ಲರೂ ಸಂಗಮದಲ್ಲಿ ಎಷ್ಟು ಹೆಚ್ಚು ಸಮಯವಿರುವೆವೋ ಅಷ್ಟು ಒಳ್ಳೆಯದು ಎಂದು ಹೇಳುತ್ತಿದ್ದರು ಏಕೆಂದರೆ ಸಾಕಾರನ ಜೊತೆಗೆ ಕಾರ್ಯದ ಶೋಭೆ ಇತ್ತು. ಎಲ್ಲಿ ನಮ್ಮ ಪ್ರಿಯತಮನೋ ಅಲ್ಲಿಯೇ ನಾವು ಹೋಗೋಣವೆಂದು ಇಚ್ಚಿಸುತ್ತೀರಿ. ನಿಮ್ಮ ಚಲನೆ ವಾಣಿಗಿಂತ ಹೆಚ್ಚು ಸೇವೆ ಮಾಡುತ್ತದೆ. ಡಬಲ್ ಸೇವೆಯಲ್ಲಿ ಸಫಲತೆ ಇರುವುದು, ಆಗಲೇ ಎರಡು ಕಿರೀಟಗಳು ಸಿಗುವವು. ಹೇಳಿ ಒಂದು ಕಿರೀಟಧಾರಿಯಾಗುವಿರಾ ಅಥವಾ ಎರಡಾ? ಅಥವಾ ಆಗಿಯೇ ಬಿಟ್ಟಿರುವಿರೋ? ಶಕ್ತಿರೂಪರಾಗುವ ಸಾಧನ ಯಾವುದು? ಅವ್ಯಕ್ತ ಸ್ಥಿತಿಯಾದಾಗ ಶಕ್ತಿರೂಪರಾಗಲು ಸಾಧ್ಯ. ಅವ್ಯಕ್ತ ಸ್ಥಿತಿಯಲ್ಲಿದ್ದು ವ್ಯಕ್ತದಲ್ಲಿ ಕೇವಲ ಸೇವೆಗಾಗಿ ಬರುತ್ತೀರಿ. ಸೇವೆ ಸಮಾಪ್ತಿಯಾದಾಗ ಮತ್ತೆ ಅವ್ಯಕ್ತ ಸ್ಥಿತಿಯಲ್ಲಿರುವ ಅಭ್ಯಾಸವನ್ನು ಮಾಡಿ.

ಬಲಿ ಕೊಡುವವರಿಗೆ ಪ್ರತಿಫಲವಾಗಿ ಏನು ಸಿಗುತ್ತದೆ? ಬಲಿ ಕೊಡುವವರಿಗೆ ಈಶ್ವರೀಯ ಬಲ ಬಹಳ ಸಿಗುತ್ತದೆ. ಯಾರು ಸಂಪೂರ್ಣ ಸ್ವಾಹಾ ಆಗುತ್ತಾರೋ ಅವರೇ ಸದಾ ಮುತ್ತೈದೆಯರು, ಅವರ ಅವಿನಾಶಿಯಾದ ತಿಲಕ ಸದಾ ವಿನಾಶವಾಗದೇ ಉಳಿಯುವುದು. ಆತ್ಮ ಸ್ಥಿತಿಯಲ್ಲಿ ಸ್ಥಿತರಾಗುವ ಬಿಂದಿ ಸದಾ ಮುತ್ತೈದೆಯರಿಗೆ ನೆನಪಿನಲ್ಲಿರುತ್ತದೆ. ಮುತ್ತೈದೆಯರ ಗುರುತು ಮತ್ತೇನಾಗಿದೆ? ವ್ಯವಹಾರದಲ್ಲಿ ಹಣೆಯಲ್ಲಿ ಕುಂಕುಮ ಮತ್ತು ಬಳೆಗಳು ಆಗಿವೆ. ಅವು ಸಂಗಮರೂಪದ ಬಳೆಗಳಾಗಿವೆ ಇವೆರಡನ್ನೂ ಎಂದಿಗೂ ತೆಗೆಯಬೇಡಿ, ಸಂಗಮದ ಬಳೆಗಳನ್ನು ತೆಗೆಯುವುದರಿಂದ ಮುತ್ತೈದೆ ಭಾಗ್ಯ ನಾಶವಾಗುತ್ತದೆ.

ಈಗ ವಿಶೇಷವಾಗಿ ಅದ್ಭುತವಾದ ಸೇವೆ ಮಾಡಬೇಕಾಗಿದೆ. ತಮ್ಮ ಸಂಗದಿಂದ ಎಂದಿಗೂ ಅಳಿಸದಂತಹ ಬಣ್ಣವನ್ನು ಎಲ್ಲರಿಗೂ ಹಚ್ಚಿ. ಸಂಗ್ರಹಾಲಯದಲ್ಲಿ ಕೇವಲ ಸಂದೇಶವನ್ನು ಪಡೆದು ಹೋಗುತ್ತಾರೆ. ಆದರೆ ಈಗ ನಮ್ಮ ಸಂಗದ ರಂಗು ಎಂದಿಗೂ ಅವರು ಅಳಿಸಲಾಗದಷ್ಟು ಅವಿನಾಶಿಯಾಗಿರಬೇಕು ಎಂಬುದನ್ನು ಗಮನದಲ್ಲಿಟ್ಟುಕೊಳ್ಳಿ. ಈಗ ಜಿಗಿದು ಮುಂದೆ ಹೋಗಬೇಕು, ಮೊದಲು ಕೇವಲ ನಡೆದು ಹೋಗುವ ಸಮಯವಾಗಿತ್ತು. ನಂತರ ಓಡುವ ಸಮಯವೂ ಬಂತು. ಈಗ ಜಿಗಿಯುವ ಸಮಯ, ಒಂದು ವೇಳೆ ಓಡಿ ತಲುಪಲು ಪ್ರಯತ್ನಿಸಿದರೆ ಬಹಳ ತಡವಾಗಿ (too late) ತಲುಪುವಿರಿ, ಜಿಗಿದು ಹೋಗುವುದರಲ್ಲಿ ಸಮಯ ಬೇಕಾಗಿಲ್ಲ. ಏಕರಸ ಸ್ಥಿತಿಯಲ್ಲಿರಲು ಒಂದೇ ಶುದ್ಧ ಸಂಕಲ್ಪವಿಟ್ಟುಕೊಳ್ಳಬೇಕು. ಅದಾವುದು? ಒಂದು ಸ್ನೇಹಿಯಾಗುವುದು, ಇನ್ನೊಂದು ಸೇವೆಗೆ ಯೋಗ್ಯರಾಗುವುದು, ಇವೆರಡರ ಹೊರತು ಇನ್ನೊಂದು ಸಂಕಲ್ಪವಿಲ್ಲ. ಸೇವಾಧಾರಿಗೆ ಸೇವೆಯದೇ ಸಂಕಲ್ಪ ನಡೆಯುತ್ತದೆ. ಸ್ವಯಂ ಪರಿವರ್ತನೆಯಿಂದ ಅನ್ಯರ ಪರಿವರ್ತನೆ ಎಂಬುದೇ ಭಟ್ಟಿಯ ಉದ್ದೇಶವಾಗಿದೆ. ಇದನ್ನು ಸದಾ ನೆನಪಿಟ್ಟುಕೊಳ್ಳಬೇಕು. ಇದಾಗಿದೆ ನಿಶ್ಚಯದ ಮುದ್ರೆ, ತಮ್ಮ ಮೇಲೆ ಯಾವ ಮುದ್ರೆ ಬಿದ್ದಿದೆ? ನಿಶ್ಚಯಬುದ್ಧಿ, ನಷ್ಟೋಮೋಹ

ಮತ್ತು ಸೇವಾಧಾರಿ ಎಂದು. ಈಗ ಈ ತ್ರಿಮೂರ್ತಿ ಚಿಹ್ನೆ ಇದೆ. ಈ ಚಿಹ್ನೆಯನ್ನು ಸದಾ ಇಟ್ಟುಕೊಳ್ಳಿ. ತಮ್ಮ ಸಮಾನ ಬೇರೆಯವರನ್ನು ತಮಗಿಂತಲೂ ಶ್ರೇಷ್ಠ ಮಾಡಿ. ಕಡಿಮೆಯಲ್ಲ. ನಮಗಿಂತಲೂ ಶ್ರೇಷ್ಠರಾದರೆ ಅದೂ ಸಹ ನಮ್ಮದೇ ಶ್ರೇಷ್ಠತೆಯಲ್ಲವೇ. ಓಂ ಶಾಂತಿ

ಅವ್ಯಕ್ತ ಮುರಳಿ 28-09-1969.

***ಪೂರ್ಣ ಕೋರ್ಸ್ ನ ಸಾರ "ಹೇಳುವುದು ಮತ್ತು ಮಾಡುವುದನ್ನು ಒಂದೇ ಮಾಡಿ"***

ಯೋಗ ಸ್ಥಿತಿಯಲ್ಲಿ ಇದ್ದು ಮನನ-ಚಿಂತನೆ ಮಾಡಿ ಧಾರಣೆಯಲ್ಲಿ ತರಬೇಕಾದ ಸಂಕಲ್ಪಗಳು.

**ಯೋಗ ಸ್ಥಿತಿ/ಆತ್ಮಿಕ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಏನು ಹೇಳುತ್ತೇನೆಯೋ ಅದನ್ನೇ ಮಾಡುವ (ಮನಸಾ, ವಾಚಾ, ಕರ್ಮಣಾ ಸಮನಾಗಿರುವುದು) ಮತ್ತು ಯೋಚಿಸುವ ಕರ್ಮಾತೀತ ಸ್ವರೂಪ.

2. ನಾನು ದೂರುಗಳನ್ನೆಲ್ಲಾ ಸಮಾಪ್ತಿ ಮಾಡಿರುವ ಶ್ರೇಷ್ಠನು.

3. ನಾನು ಸತ್ಯತೆ ಮತ್ತು ಸ್ವಚ್ಛತೆಯ ಸ್ವರೂಪ.

4. ನಾನು ಪ್ರಭು ಮತ್ತು ಸರ್ವರಿಗೂ ಪ್ರಿಯನು.

5. ನಾನು ನನ್ನ ದೃಷ್ಟಿ, ವಾಣಿ, ಕರ್ಮದಲ್ಲಿ ಪರಿಪಕ್ವವಾಗಿದ್ದೇನೆ.

6. ನಾನು ಪ್ರತಿಕ್ಷಣ ಸೇವೆಯನ್ನೇ ಮಾಡುತ್ತಿದ್ದೇನೆ (ಮನ, ವಚನ, ಕರ್ಮ ಪವಿತ್ರವಾಗಿ ಮತ್ತು ಸಂಬಂಧ ಸಂಪರ್ಕಗಳಲ್ಲಿ ಸ್ನೇಹದಿಂದ ಇರುವುದು).

7. ನಾನು ಬೆಹದ್ ಸೇವಾಧಾರಿ.

8. ನಾನು ಸದಾ ನಿಶ್ಚಯದಿಂದ ಇರುವ ವಿಜಯೀ ಸ್ವರೂಪ.

9. ನಾನು ಬಾಪ್ ದಾದಾ ಮತ್ತು ಪರಿವಾರದೊಂದಿಗೆ ಸ್ನೇಹಿಯಾದ ಕಾರಣ ಸಹಯೋಗವನ್ನು ಸ್ವತಃವಾಗಿ ಪಡೆಯುತ್ತಿದ್ದೇನೆ.

10. ನಾನು ಸದಾ ನಿಶ್ಚಯ ಬುದ್ಧಿ ಮತ್ತು ನಷ್ಟಮೋಹ ಎಂಬ ರತ್ನಗಳಿಂದ ಶೃಂಗರಿಸಿಕೊಂಡಿರುವ ಶೃಂಗರಿತ ಮೂರ್ತಿ.

11. ನಾನು ಚಲನೆ ಮತ್ತು ವಾಣಿಯಿಂದ ಸೇವೆಯನ್ನು ಮಾಡುವ ಡಬಲ್ ಕಿರೀಟಧಾರಿ.

12. ನಾನು ಸದಾ ಮುತ್ತೈದೆ.

13. ನಾನು ಸದಾ ಏಕರಸ ಸ್ಥಿತಿ ಸ್ವರೂಪ.